# ಇಸ್ರೇಲ್ ಮಾದರಿ ಕೃಷಿ



**ರೈತರು ತಮಗೆ ಬೇಕಾದ ಪ್ರಮಾಣದ ನೀರಿಗಾಗಿ ಜಲ ಪ್ರಾಧಿಕಾರಕ್ಕೇ ಅರ್ಜಿ ಸಲ್ಲಿಸಬೇಕು. ಕೃಷಿ, ಮನೆ ಬಳಕೆ, ಉದ್ದಿಮೆ– ಯಾವುದೇ ಇರಲಿ, ಎಲ್ಲರೂ ನೀರನ್ನು ಹಣ ಕೊಟ್ಟು ಖರೀದಿಸುವುದು ಕಡ್ಡಾಯ!**

**■ ಪಾಂಡುರಂಗ ಹೆಗಡೆ**

ಈ ವರ್ಷ ಮಳೆ ಸಾಧಾರಣಕ್ಕಿಂತ ಹೆಚ್ಚಾಗಿದ್ದು, ಆಗಲೇ ನಮ್ಮ ಜಲಾಶಯಗಳು ನೀರಿನಿಂದ ತುಂಬಿ ತುಳುಕುತ್ತಿವೆ. ಹಿಂದಿನ ನಾಲ್ಕು ವರ್ಷದ ಬರಗಾಲದ ಬವಣೆಯನ್ನು ನಾವು ಆಗಲೇ ಮರೆತಂತಿದೆ. ಪಟ್ಟಣದ ಕೆರೆಗಳನ್ನು ಸರಕಾರ ಹಾಗೂ ಭೂ ಮಾಫಿಯಾ ಕಬಳಿಸಿದರೆ, ಹಳ್ಳಿಯ ಕೆರೆಗಳನ್ನು ಅಲ್ಲಿರುವ ಬಲಾಢ್ಯರು ಅತಿಕ್ರಮಣ ಮಾಡಿ ನೀರಿನ ಸೆಲೆಗಳು ಬತ್ತಿ ಕೊಳವೆ ಬಾವಿಗೆ ಶರಣು ಹೋಗುವ ಅನಿವಾರ್ಯತೆಯನ್ನು ಎಲ್ಲೆಡೆ ಕಾಣಬಹುದು.

ರಾಜಸ್ಥಾನದ ಮರುಭೂಮಿಗಿಂತಲೂ ಹೆಚ್ಚು ಒಣ ಪ್ರದೇಶ ಕರ್ನಾಟಕದಲ್ಲಿದೆ ಎಂದು ಅಂಕಿ– ಅಂಶಗಳು ಹೇಳುತ್ತಿರುವಾಗ, ನಾವು ಮುಂಬರುವ ವರ್ಷಗಳಲ್ಲಿ ಬರಗಾಲವನ್ನು ಎದುರಿಸಲು ಈಗಿನಿಂದಲೇ ಪ್ರಯತ್ನ ನಡೆಸುವುದು ಅನಿವಾರ್ಯವಾಗಿದೆ.

ರಾಜಕಾರಣಿಗಳು ‘ಇಸ್ರೇಲ್ ಮಾದರಿ ನೀರಾವರಿ ವ್ಯವಸ್ಥೆಯನ್ನು ಮಾಡುತ್ತೇವೆ’ ಎನ್ನುತ್ತಾರೆ. ಕೆಲವರು ಈ ಬಗ್ಗೆ ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಜನರಿಗೆ ಆಶ್ವಾಸನೆಯನ್ನೂ ನೀಡಿದ್ದರು. ಕೆಲವು ವರ್ಷಗಳ ಹಿಂದೆ ನಮ್ಮ ರೈತರನ್ನು ಇಸ್ರೇಲ್‌ಗೆ ಕೃಷಿ ಪ್ರವಾಸಕ್ಕೆಂದು ಕರೆದುಕೊಂಡೂ ಹೋಗಿದ್ದರು. ಇದರಿಂದ ಯಾರಿಗೆ ಪ್ರಯೋಜನವಾಗಿದೆಯೋ ತಿಳಿಯದು, ಆದರೆ ರಾಜ್ಯದ ಪ್ರತಿಯೊಬ್ಬ ಕೃಷಿಕನಿಗೂ ಇಸ್ರೇಲ್ ಮಾದರಿ ಎಂದರೆ ಏನು ಎಂಬ ಕುತೂಹಲ ಉಂಟಾಗಿರುವುದಂತೂ ನಿಜ.

ಭಾರತ 1947ರಲ್ಲಿ ಸ್ವತಂತ್ರ ದೇಶವಾದರೆ, ಇಸ್ರೇಲ್ 1948ರಲ್ಲಿ ಅಸ್ತಿತ್ವಕ್ಕೆ ಬಂತು. ಭಾರತಕ್ಕೆ ಹೋಲಿಸಿದರೆ ಇಸ್ರೇಲ್ ಚಿಕ್ಕ ದೇಶ– ಕ್ಷೇತ್ರಫಲ ಹಾಗೂ ಜನಸಂಖ್ಯೆ ದೃಷ್ಟಿಯಿಂದ. ಇಸ್ರೇಲ್‌ನ ಭೂಭಾಗದ ಕೇವಲ ಪ್ರತಿಶತ 40ರಷ್ಟು ಪ್ರದೇಶದಲ್ಲಿ ಮಾತ್ರ ಅತ್ಯಲ್ಪ ಮಳೆಯಾದರೆ, ಉಳಿದ ಶೇಕಡಾ 60 ಭಾಗ ಮರುಭೂಮಿ. ಭೌಗೋಲಿಕವಾಗಿ ನೆರೆದೇಶಗಳಿಂದ ಕಠಿಣ ಪರಿಸ್ಥಿತಿ ಎದುರಿಸುತ್ತಿದೆ. ಹಾಗಿದ್ದೂ ಲಭ್ಯವಿರುವ ನೀರಿನ ಸಮರ್ಪಕ ಬಳಕೆಯಿಂದ ಹೇಗೆ ಮರುಭೂಮಿಯಲ್ಲಿ ನಂದನವನವನ್ನು ಸೃಷ್ಟಿಸಿತು ಎಂಬುದು ಕುತೂಹಲಕರ.

ಮರುಭೂಮಿಯಲ್ಲಿ ಹನಿ ನೀರಿಗೂ ಬೆಲೆ ಇರುವಾಗ, ಅದರ ನಿರ್ವಹಣೆಯ ಹೊಣೆಯನ್ನು ಸರಕಾರವೇ ಮಾಡುವುದು ಉಚಿತ ಎಂಬ ನಿಲುವಿನೊಂದಿಗೆ ಇಸ್ರೇಲ್‌ನ ಸರಕಾರ ನೀರನ್ನು ಸರಕಾರದ ಸ್ವತ್ತು ಎಂದು ಘೋಷಣೆ ಮಾಡಿದೆ. ನೀರಿನ ಮಾಲಿಕತ್ವ ಮತ್ತು ನಿರ್ವಹಣೆಯ ಹೊಣೆಯನ್ನು ಜಲ ಪ್ರಾಧಿಕಾರಕ್ಕೆ ನೀಡಿದೆ. ಯಾವುದೇ ಜಲಮೂಲಗಳನ್ನು ವೈಯುಕ್ತಿಕ ಹಿತಕ್ಕಾಗಿ ಬಳಸುವುದನ್ನು ನಿಷೇಧಿಸಿದೆ. ಅಲ್ಲಿ ಮಳೆ ನೀರನ್ನು ಜನರು ಸಂಗ್ರಹಿಸಿದರೆ ಅದೂ ಅಪರಾಧವಾಗುತ್ತದೆ! ಅಲ್ಲಿ ಕೊಳವೆ ಬಾವಿಗಳನ್ನು ತೋಡಲು ಅನುಮತಿಯನ್ನು ನೀಡದೇ 63 ವರ್ಷಗಳಾಗಿವೆ ಎಂದರೆ ನಂಬಲೇಬೇಕು!

ಕೃಷಿ, ಮನೆ ಬಳಕೆಗೆ ಹಾಗೂ ಉದ್ದಿಮೆಗಳಿಗೆ ಎಷ್ಟು ಪ್ರಮಾಣದಲ್ಲಿ ನೀರು ಬೇಕು ಎಂಬುದರ ಕುರಿತು ವಿವರವಾದ ಮಾಹಿತಿ ಮೊದಲೇ ಸಂಗ್ರಹಿಸಿ, ನಂತರ ನೀರಿನ ನಿರ್ವಹಣೆಯ ರೂಪುರೇಷೆಯನ್ನು ಸಿದ್ಧಪಡಿಸುತ್ತಾರೆ. ನೀರು ಬಳಕೆಯಾಗುವ ಪ್ರತಿಯೊಂದು ಕಡೆ ಮೀಟರ್ ಅಥವಾ ಮಾಪಕವನ್ನು ಅಳವಡಿಸಿ, ಎಲ್ಲಿ ಎಷ್ಟು ಪ್ರಮಾಣದಲ್ಲಿ ನೀರಿನ ಬಳಕೆ, ಸೋರಿಕೆ ಆಗುತ್ತಿದೆ ಎಂಬುದನ್ನು ಅರಿಯುವುದು ಮೊದಲನೆಯ ಹಂತ.

ಯಾವ ಬೆಳೆಯನ್ನು ರೈತ ಬೆಳೆಯಬಹುದು ಮತ್ತು ಅದನ್ನು ಬೆಳೆಯಲು ಎಷ್ಟು ನೀರು ಬೇಕು ಎಂಬುದರ ಬಗ್ಗೆ ನಿಖರವಾದ ಮಾಹಿತಿಯನ್ನು ಸಂಶೋಧನೆಯ ಮೂಲಕ ಪಡೆದು, ಬೇಕಾದ ಪ್ರಮಾಣದ ನೀರಿಗಾಗಿ